ಸಲಿಗೆ ಒಂದು ವಯಸ್ಸಿಗೆ ಬಂದ ಮೇಲೂ ಮುಂದುವರಿದಿತ್ತು. ರೋಸ್ ಕಾಲೇಜಿಗೆ ಬರುವ ವೇಳೆಗೆ ಅಜ್ಜಿ ಎಲ್ಲಿಗೂ ಈ ಒಡನಾಟದ ಕುರಿತು ಚಿಂತೆಯಾಗಿತ್ತು. ಚಿಕ್ಕಂದಿನಿಂದ ಕೂಡಿಯಾಡಿ ಬೆಳೆದ ಮಕ್ಕಳಿಗೆ ಹೇಳುವುದಾದರೂ ಹೇಗೆ ಎಂದು ಪರಿತಪಿಸುತ್ತಿದ್ದಳು. ಸೂಸನ್ ಚಿಂತಿಸಲು ಇನ್ನೂ ಹೆಚ್ಚಿನ ಕಾರಣವೆಂದರೆ ಅವನು ತನ್ನ ಮಗಳ ಎಲ್ಲ ಹುಟ್ಟುಹಬ್ಬಕ್ಕೆ ಬಂದು ಶುಭಾಶಯ ಹೇಳಿ ಹೋಗುವುದು. ಆಡಲಾರದ, ಅನುಭವಿಸಲಾರದ ಸ್ಥಿತಿ ಅಂತ ಒಳಗೊಳಗೇ ಕೊರಗುತ್ತಿದ್ದರು. ಇವರಿಬ್ಬರ ಮಧ್ಯೆ ಪ್ರೇಮವಿರಬಹುದೆ ಎಂಬ ಅನುಮಾನ ಬಂದರೂ ತಾವಾಗೇ ಕೇಳುವುದು ಬೇಡ, ಹಾಗೊಂದು ವೇಳೆ ಏನೂ ಇಲ್ಲದಿದ್ದರೆ ತಾವೇ ಅಂತಹ ವಿಚಾರವನ್ನು ಅವಳ ತಲೆಗೆ ಹಾಕಿದಂತಾಗುತ್ತೆ ಅಂದುಕೊಂಡು ಸುಮ್ಮನಿದ್ದರು. ಆ ಜನ್ಮದಿನದ ನಂತರ ಮತ್ತೆರಡು ಜನ್ಮದಿನಗಳು ಬಂದವು. ರೋಸ್ ಆರ್ಕಿಟೆಕ್ಚರ್‌ನ ಕೊನೆಯ ವರ್ಷದಲ್ಲಿದ್ದಳು. ಯಾವುದೇ ವ್ಯತ್ಯಾಸವಿಲ್ಲದಂತೆ ಮೂರ್ತಿ ಆ ದಿನ ಮನೆಗೆ ಬಂದಿದ್ದ. ಅವರಿಬ್ಬರ ನಡುವೆ ಏನೂ ಇಲ್ಲದೆಯೂ ಇರಬಹುದು, ಅವರಿಬ್ಬರು ಒಳ್ಳೆಯ ಗೆಳೆಯರೂ ಇರಬಹುದು ಅಂದುಕೊಂಡು ಸಮಾಧಾನ ಹೇಳುವ ಗಂಡನ ಮಾತನ್ನು ಪೂರ್ತಿ ನಂಬದಿದ್ದರೂ, ನಂಬಿದಂತೆ ನಟಿಸಿ ತನ್ನ ಎಚ್ಚರದಲ್ಲಿದ್ದಳು. ಮಗಳು ಮನೆಯಲ್ಲಿಲ್ಲದಾಗ ಅವಳ ರೂಮಿನ ಎಲ್ಲ ಬೀರುಗಳನ್ನು, ಡ್ರಾವರ್‌ಗಳನ್ನು, ಪುಸ್ತಕಗಳನ್ನು, ಹಾಸಿಗೆಯಡಿಯನ್ನೂ ತಲಾಶು

